ಎಚ್. ಆನಂದ್‌ಕುಮಾರ್, ಚಿತ್ರದುರ್ಗ
*ಕಮಲ ಮುದುಡಿದೆ, ಹಸ್ತ ಮಸಿ ಮೆತ್ತಿಕೊಂಡಿದೆ, ದಳ ಎಂದೂ ದ್ವಿದಳ. ಮುಂದೆ ಯಾವುದು ರಾಮ್?*



ಅವುಗಳದೇ ಮ್ಯೂಸಿಕಲ್ ಛೇರ್, ಭಾಗ 3!

ಶಿಲ್ಪಿ ರಮೇಶ್, ಹನುಮನಾಳು
*ನನ್ನನ್ನು ಕಂಡಾಗಲೆಲ್ಲಾ ಇಲ್ಲೊಬ್ಬಳು ದೇವರು ಕೊಟ್ಟದ್ದನ್ನು ಪರರಿಗೆ ಹಂಚು ಎಂದು ಹೇಳುತ್ತಾಳಲ್ಲಾ, ಏಕೆ ರಾಮ್?*
ತಿಳಿಯಿತು! ಅವಳು ರೆಡ್ ಕ್ರಾಸ್‌ನವಳು. ಆರೋಗ್ಯವಂತರಿಂದ ರಕ್ತ ಪಡೆದು ಹಂಚುವುದು ಅವಳ ಜನಸೇವೆಯ ಪರಿ!

ಮೀರಾ ಮೋಹನ್, ಬೆಂಗಳೂರು
*ಶಾಸಕಾಂಗ ಸಭೆಗಳಲ್ಲಿ ತಕ್ಷಣ ಸರ್ವಾನುಮತದಿಂದ ಅನುಮೋದಿಸಲ್ಪಡುವ ಏಕೈಕ ಮಸೂದೆ ಯಾವುದು?*
ಭ್ರಷ್ಟಾಚಾರ ನಿರ್ಮೂಲನೆ ತಡೆಯುವ ಮಸೂದೆ.

ಜಾಕೋಬ್ ಡಿಸೋಜ, ಕುರುವಳ್ಳಿ
*ಒಂದೇ... ಒಂದೇ... ನಾವೆಲ್ಲರೂ ಒಂದೇ... ಎನ್ನುವರಲ್ಲಾ, ಹೇಗೆ?*
ಜಾತಿ ಬೇರೆ, ಕುಲ ಬೇರೆ, ಮತ ಬೇರೆ, ಮತ ಬೇರೆ ಎನ್ನುವುದರಲ್ಲಿ... ನಾವೆಲ್ಲರೂ ಒಂದೇ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ನೂರೆಂಟು ಆಸೆಗಳು, ಒಂದೂ ಈಡೇರಲಿಲ್ಲ. ಏನ್ಮಾಡ್ಲಿ ರಾಮ್?*




ಛೆ! ಛೆ! 108 ಆಂಬುಲೆನ್ಸ್ ನಂಬರ್, ಅದಕ್ಕೇಕೆ ಆಸೆ ಪಡುವಿರಿ, ಸುಮ್ಮನಿರಿ.

ದಿನೇಶ್, ಗುಡ್ಡದೂರು
*ನನ್ನ ಸ್ನೇಹಿತನೊಬ್ಬನಿಗೆ ಚಳ್ಳೆಹಣ್ಣು ತಿನ್ನುವ ಆಸೆಯಾಗಿದೆಯಂತೆ. ಎಲ್ಲಿ ಸಿಗುತ್ತದೆ ತಿಳಿಸುವಿರಾ?*
ಬರೆದುಕೊಳ್ಳಿ. ಪ್ರೊಪ್ರೈಟರ್ ಎಡವೀರಪ್ಪ, ಸಗಟು ಮಾರಾಟಗಾರರು, ಎಡ್ಯೂರ್ ಫ್ರೂಟ್ ಸೆಂಟರ್, ಕೆಜೆಪಿ ಕಾಂಪ್ಲೆಕ್ಸ್, ಬೆಂಗಳೂರು.

ಕುಮಾರ ಚಲವಾದಿ, ಹೊಳೆನರಸಿಪುರ
*ಬರೀ ಡಬಲ್ ಮೀನಿಂಗ್ ಇರುವ ಕನ್ನಡ ಚಲನಚಿತ್ರ ತೆಗೆಯುವ ಆಲೋಚನೆ ಬಂದಿದೆ. ನೀವೇ ಹೀರೋ. ಬರ್ತೀರಾ...?*
ಈ ಕ್ಷಣವೇ ಮಲಗಿ ನಿದ್ದೆ ಹೋಗಿಬಿಡಿ. ಎದ್ದಮೇಲಾದರೂ ಬುದ್ಧಿ ಸರಿಹೋದೀತು!

ಬಿ. ಚಂದ್ರೇಗೌಡ, ಬೆಂಗಳೂರು
*ಮಾನವ ಜನ್ಮ ಯಾಕೆ ದೊಡ್ಡದು?*
ಮಾನ ಇರುವುದರಿಂದ.

ಮಹಾಲಿಂಗ ಎಂ. ಗೋರಬಾಳ, ಗೋಕಾಕ
*ಗಾಳಿ, ನೀರು, ಕುದುರೆಯ ವೇಗವನ್ನು ನಿಯಂತ್ರಿಸಬಹುದು. ಆದರೆ ಹೆಣ್ಣಿನ ಮನಸ್ಸನ್ನು ಅರಿತವರಿಲ್ಲವಂತೆ?*
ಅರಿಯಲು ಸಾಧ್ಯವೂ ಇಲ್ಲ. ಹೆಣ್ಣಿನ ಮನ ಮತ್ತು ಫ್ಯಾಷನ್ ಎರಡೂ ಒಂದೇ. ಅರಿತೆ ಎನ್ನುವಷ್ಟು ಹೊತ್ತಿಗೆ ಬದಲಾಗಿಬಿಟ್ಟಿರುತ್ತದೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಭ್ರಷ್ಟರಿಲ್ಲದ ಜಾಗದಲ್ಲಿ ಬಾಳೆಹಣ್ಣು ತಿನ್ನು ಎಂದಿದ್ದರೆ ಕನಕದಾಸರು ಏನು ಮಾಡುತ್ತಿದ್ದರು?*
ಪಾಪ! ಅವರ ಬಾಳೇ ಹಣ್ಣಾದರೂ ಅವರು ಬಾಳೆಹಣ್ಣು ತಿನ್ನಲಾಗುತ್ತಿರಲಿಲ್ಲ!

ಆರಿಫ್, ದಾವಣಗೆರೆ
*ಇಲ್ಲೊಂದು ಹುಡುಗಿ ಪ್ರೀತಿ ನಮ್ಮ ಬಲೆಯೊಳಗೋ ಅಥವಾ ಪ್ರೀತಿಯ ಬಲೆಯೊಳಗೆ ನಾವೋ ಎಂದು ಪ್ರಶ್ನಿಸುತ್ತಿದ್ದಾಳಲ್ಲಾ...?*
ಎರಡೂ ಅಲ್ಲ. ಪ್ರೀತಿಯೆಂಬ ಮಹಾಸಾಗರದಲ್ಲಿ ನೀವಿಬ್ಬರು ಮೀನ-ಮೇಷ ಎಣಿಸುವ ಎರಡು ಸಣ್ಣ ಮೀನುಗಳಷ್ಟೆ.

ಡಿ.ಎಲ್. ಶ್ವೇತಾ, ಚನ್ನಗಿರಿ
*ದೆವ್ವ, ಭೂತ, ಮೋಹಿನಿ ಇವೆಲ್ಲ ಬರೀ ಬಿಳಿಯ ಸೀರೆಯನ್ನೇ ಉಡುತ್ತವೆಯಲ್ಲ, ಏಕೆ?*
ವರ್ತಮಾನಕಾಲದ್ದವಾದರೆ ಬಿಳೀ ಜೀನ್ಸ್, ಬಿಳಿ ಟಾಪ್ ತೊಡಬಹುದಿತ್ತು, ಆದರೆ ಭೂತಕಾಲದವಾದ್ದರಿಂದ ಸೀರೆಯೇ ಗತಿಯಂತೆ!

ಗೌರಿ ಶೇಷಾದ್ರಿ, ಉತ್ತನಹಳ್ಳಿ
*ಈಗಿನ ಯುವಕ- ಯುವತಿಯರು ತಂದೆ-ತಾಯಿಗಳಿಗಿಂತ ಸ್ನೇಹಿತರನ್ನು ಅವಲಂಬಿಸಿರುವುದು ಏಕೆ?*
ನೆಟ್ಟಗೆ ಸಿಗದ ತಂದೆ-ತಾಯಿಗಳಿಗಿಂತ ನೆಟ್‌ಗೆ ಸಿಗುವ ಸ್ನೇಹಿತರೇ ವಾಸಿಯಂತೆ!

## ಬಹುಮಾನಿತ ಪ್ರಶ್ನೆ

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ
*ಹೊಸ ಹೆಂಡತಿ, ಹೊಸ ಚಪ್ಪಲಿ. ಏನು ಸಾಮ್ಯ?*
ಎಲ್ಲೇ ಇದ್ದರೂ ಮನಸ್ಸು ಅತ್ತಲೇ ಸೆಳೆಯುತ್ತಿರುತ್ತದೆ.

ಎಂ.ಬಿ. ರಂಗಪ್ಪಶೆಟ್ಟಿ, ಮೋಕ
*ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ. ದೋಚಿದ್ದು...?*
ಪರದೇಶದ ಬ್ಯಾಂಕಿಗೆ.

ಮೈಸೂರು ಕುಸುಮ, ಶ್ರವಣಬೆಳಗೊಳ
*ದೇವರು ಕೆಲವರಿಗೆ ಎಲ್ಲವನ್ನೂ ಕರುಣಿಸಿರುತ್ತಾನೆ, ಇನ್ನು ಕೆಲವರಿಗೆ ಏನೇನೂ ಇರುವುದಿಲ್ಲ. ಹೀಗೇಕೆ?*
ಕೇಳಿದವರಿಗೆಲ್ಲಾ ಕೇಳಿದ್ದನ್ನೆಲ್ಲಾ ಕೊಟ್ಟರೆ ಎಲ್ಲಾ ದೇವತೆಗಳಿಗೂ ಶಿವನಂತೆಯೇ ವಸ್ತ್ರ ನಾಸ್ತಿ, ಬೀಡು ಸುಡುಗಾಡು ಆಗುವುದೆಂಬ ಭಯ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ತಮ್ಮ ಭವಿಷ್ಯವನ್ನು ತಾವು ತಿಳಿಯದವರು ಇನ್ನೊಬ್ಬರ ಭವಿಷ್ಯವನ್ನು ಹೇಳುವುದು ಸರಿಯೆ?*



ಕೇಳುಗರದೇ ತಪ್ಪು. ಕುರಿ ತಾನಾಗಿಯೇ ಬಂದು ಚರ್ಮ ಸುಲಿ ಎಂದು ಕೇಳಿಕೊಂಡರೆ ಯಾವ ಕಟುಕ ಬಿಟ್ಟಾನು ಬಿಡಿ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ವಯಸ್ಸಾದ ಹಳೇ ಹುಣಸೆಮರಕ್ಕೂ, ವಯಸ್ಸಾದ ಮುದುಕರಿಗೂ ಏನು ವ್ಯತ್ಯಾಸ?*
ವಯಸ್ಸಾದಷ್ಟೂ ಮರದ್ದು ಹುಳಿ ಹೆಚ್ಚು, ಮುದುಕರದು ಹುಳುಕು ಹೆಚ್ಚು.

ಆರ್. ಮಧುಸೂದನ್, ಹಾಸನ
*ಖರ್ಚಿನ ಬಾಬ್ತಿನಲ್ಲಿ ಕಾರ್ ದುಬಾರಿಯೋ, ಪೆಟ್ರೋಲ್ ದುಬಾರಿಯೋ?*
ಕಾರ್‌ದು ಭಾರಿ, ಪೆಟ್ರೋಲ್ ದುಬಾರಿ.

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಯೌವನ ಮತ್ತೆ ಮರುಕಳಿಸುವಂತಿದ್ದರೆ?*
ಪುನರಪಿ ವಿಂಕಿಂಗ್, ಪುನರಪಿ ಸ್ಟಾಕಿಂಗ್, ಪುನರಪಿ ನರ್ಸಿಂಗ್ ಹೋಂ ಬೆಡ್ಡೇ ಶಯನಂ!

■ ರಾಮ್